## ನಾಂದಿಪದ

# ಜೀವನದ ಕಥೆಗಳು

ಕಥನಪ್ರಿಯರ ಪಾಲಿಗೆ 'ಮಯೂರ' ಸಣ್ಣಕಥೆಗಳ ಕಲ್ಪವೃಕ್ಷ. ಆಯಾ ಕಾಲದ ಅತ್ಯುತ್ತಮ ಕಥೆಗಳನ್ನು ಒಳಗೊಳ್ಳುವ ಪ್ರಯತ್ನವನ್ನು 'ಮಯೂರ'ದ ಪ್ರತಿ ಸಂಚಿಕೆಯಲ್ಲೂ ಗುರ್ತಿಸಬಹುದು. ಕಥೆಗಾರನ ಮನೋವ್ಯಾಪಾರದಲ್ಲಿ ಸೃಷ್ಟಿಯಾಗುವ ಸೃಜನಶೀಲ ಹೆಣಿಗೆಯ ರಚನೆಗಳು ಮಾತ್ರವಲ್ಲದೆ, ವ್ಯಕ್ತಿಚಿತ್ರ ಹಾಗೂ ಸಂದರ್ಶನಗಳ ಮೂಲಕವೂ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುವ ಅಪೂರ್ವ ಕಥೆಗಳನ್ನು ಕಾಣಿಸುವ ಪ್ರಯತ್ನವನ್ನು 'ಮಯೂರ' ಮಾಡುತ್ತಿದೆ. ಸಾಧನೆ ಹಾಗೂ ವ್ಯಕ್ತಿತ್ವದಲ್ಲೂ ಓದುಗರ ಮನಸ್ಸುಗಳನ್ನು ಆರ್ದ್ರಗೊಳಿಸುವ ಹಾಗೂ ಅರಿವು ವಿಸ್ತರಿಸುವ ಕಥೆಗಳಿರುತ್ತವೆ. ಈ ಮಾತಿಗೆ ಉದಾಹರಣೆಯಾಗಿ, ಈ ಸಂಚಿಕೆಯಲ್ಲಿನ ಸಾಲಿ ರಾಮಚಂದ್ರರಾಯರ ಸ್ಮೃತಿಚಿತ್ರ ಹಾಗೂ ಅನಿಲ್ ವಿದ್ಯಾರ್ಥಿ ಅವರ ಸಂದರ್ಶನವನ್ನು ಗಮನಿಸಬಹುದು.

ಕವಿ ಸಾಲಿ ರಾಮಚಂದ್ರರಾಯರು, ಧಾರವಾಡದ ಸಾರಸ್ವತ ಶ್ರೀಮಂತ ಪರಂಪರೆಗೆ ಸೇರಿದವರು. ಬೇಂದ್ರೆಯವರ ಸಮಕಾಲೀನರು. ಮಹಾತ್ಮ ಗಾಂಧೀಜಿ ಅವರ ಆತ್ಮಕಥೆಯನ್ನು ಗೊರೂರರಿಗೆ ಮೊದಲೇ, ನೇರವಾಗಿ ಗುಜರಾತಿಯಿಂದ ಕನ್ನಡಕ್ಕೆ ತಂದವರು (ಆ ಅನುವಾದ ಪ್ರಕಟಗೊಂಡಿಲ್ಲ). ಕವಿಯಾಗಿ, ಅನುವಾದಕರಾಗಿ ಮಾತ್ರವಲ್ಲದೆ, ವ್ಯಕ್ತಿತ್ವದಲ್ಲೂ ಸಾಲಿಯವರು ಮಾದರಿಯಂತೆ ಇರುವವರು. ಅವರ ದಿನಚರಿಯ ಕೆಲವು ಟಿಪ್ಪಣಿಗಳನ್ನು ಆಧರಿಸಿ, ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು 'ಮಯೂರ'ಕ್ಕಾಗಿ ತಮ್ಮ ಹಿರಿಯ ಮಿತ್ರರ ಸ್ಮೃತಿಚಿತ್ರ ಕಟ್ಟಿಕೊಟ್ಟಿದ್ದಾರೆ. ಈ ಸ್ಮೃತಿಚಿತ್ರ, ಸಾಲಿ ಅವರ ವ್ಯಕ್ತಿತ್ವ-ಸಾಧನೆಯನ್ನು ಹೊಸಗಾಲದ ಓದುಗರಿಗೆ ಪರಿಚಯಿಸುವಂತಿದೆ. ಸ್ವಾತಂತ್ರ್ಯದ ಬಣ್ಣಗಳ ಆಗಸ್ಟ್ ಮಾಸದ ಸಂಚಿಕೆಯಲ್ಲಿ, ಗಾಂಧಿಭಕ್ತರೂ ಆಗಿದ್ದ ಸಾಲಿಯವರ ನೆನಪು ಸಹೃದಯರ ಭಾವಕೋಶಗಳನ್ನು ಆರ್ದ್ರಗೊಳಿಸುವಂತಿದೆ.

ಅನಿಲ್ ವಿದ್ಯಾರ್ಥಿ ವಿಶ್ವಪ್ರಸಿದ್ಧ ವೃತ್ತಿಪರ ಛಾಯಾಗ್ರಾಹಕ. ಅವರೊಂದಿಗೆ ರಹಮತ್ ತರೀಕೆರೆ ಅವರು ನಡೆಸಿರುವ ಮಾತುಕತೆ, ವಿಶಿಷ್ಟ ವ್ಯಕ್ತಿಯೊಬ್ಬರನ್ನು ಪರಿಚಯಿಸುವುದರ ಜೊತೆಗೆ, ಛಾಯಾಚಿತ್ರಗಳ ಉಲ್ಲೇಖದ ಮೂಲಕ ಇತಿಹಾಸದ ಕೆಲವು ಪ್ರಮುಖ ಸಂಗತಿಗಳನ್ನೂ ನೆನಪಿಸುತ್ತದೆ. ಛಾಯಾಚಿತ್ರವೊಂದು ನೋಡಿ ಅನುಭವಿಸಬಹುದಾದ ಕಥನ ಎನ್ನುವ ನಂಬಿಕೆಗೆ ಅನಿಲ್ ಅವರ ಮಾತುಗಳು ಅಡಿಗೆರೆ ಎಳೆಯುವಂತಿವೆ.

ಇನ್ನು ನೀವುಂಟು, ಕಥೆಗಳುಂಟು.

**ಮಯೂರ ಬಳಗ**

editormy@mayura.co.in



ಕಲೆ: ಜಬೀವುಲ್ಲಾ ಎಂ. ಅಸದ್